ನೆಲಮಂಗಲದ ಸಮೀಪದ ಗೋವಿಂದರಾಯ ಬೆಂಗಳೂರಿಗೆ ಬಂದು ಮೂವತ್ತು ವರ್ಷಗಳಾಗುತ್ತಾ ಬಂದಿರಬಹುದು. ಹೊಟ್ಟೆಪಾಡಿಗಾಗಿ ಆತ ಮಾಡಿದ ಕೆಲಸಗಳಾವವು ಎಂಬುದು ಆತನಿಗೇ ನೆನಪಿರಲಿಕ್ಕಿಲ್ಲ. ಕೊನೆಗೂ ಕೈ ಹತ್ತಿದ್ದು ಎಂದರೆ ಈ ಬ್ರೋಕರ್ ಕೆಲಸ. ಅದೂ ಹತ್ತು ವರ್ಷಗಳಿಂದೀಚೆಗೆ. ಪ್ರೈವೇಟ್ ಕಂಪೆನಿಯೊಂದಕ್ಕೆ ಟೆಂಪೋ ಟ್ರಾವೆಲರ್ ಓಡಿಸುತ್ತಿದ್ದ ಆತ ಹಣದ ಸಮಸ್ಯೆಯಲ್ಲಿ ಸಿಲುಕಿ, ಮಾವನ ಮನೆಯಿಂದ ವರದಕ್ಷಿಣೆಯಾಗಿ ಸಿಕ್ಕ 30x40ರ ಸೈಟನ್ನು ಮಾರ ಹೊರಟವನು, ಅತೀ ಬುದ್ಧಿವಂತಿಕೆ ಮಾಡಲು ಹೋಗಿ, ಬ್ರೋಕರುಗಳ ನಡುವೆ ಸಿಕ್ಕಿ ಹಾಕಿಕೊಂಡು, ಏನೇನೋ ಕಾಂಪ್ಲಿಕೇಷನ್ನುಗಳಾಗಿ ಮಾರಲಾರದೇ, ಕೊನೆಗೇ ತಾನೇ ಫುಲ್‌ಟೈಮ್ ಬ್ರೋಕರ್ ಆಗಿಹೋದ. ಆವಾಗಿನಿಂದಲೇ ಅವನ ಶುಕ್ರದೆಸೆ ಶುರುವಾಯಿತೆನ್ನಬಹುದು. ಮಾರುವವರ ಹತ್ತಿರ ಒಂದು ರೇಟು, ಕೊಳ್ಳುವವರ ಹತ್ತಿರ ಒಂದು ರೇಟು ಮಾತಾಡಿ ನಡುವಿನ ಹಣವನ್ನು ತಾನು ಹೊಡೆಯುವುದು, ಕಡಿಮೆ ಬೆಲೆಗೆ ಒಬ್ಬರ ಹತ್ತಿರ ನಿವೇಶನದ ಎಗ್ರಿಮೆಂಟ್ ಹಾಕಿಸಿಕೊಂಡು, ಒಪ್ಪಂದದ ಅವಧಿ ಮುಗಿಯುವ ಒಳಗೇ ಹೆಚ್ಚಿನ ಬೆಲೆಗೆ ಬೇರೆಯವರಿಗೆ ಮಾರಿ ಬಿಡುವುದು, ಇತ್ಯಾದಿಗಳಿಂದ ಶುರುವಾದ ಆತನ ವ್ಯವಹಾರಗಳು; ಖೊಟ್ಟಿ ಖಾತಾ ಸೃಷ್ಟಿಸಿ ಸೈಟು ಮಾರುವುದು, ವಂಶವೃಕ್ಷದಲ್ಲಿಯ ಹಳೆಯ ಹೆಸರನ್ನು ಅಳಿಸಿಹಾಕುವುದರವರೆಗೂ ವಿಸ್ತೃತವಾಯಿತು. ದಲ್ಲಾಳಿಕೆಗೆ ಸಿಗುವ ಕಮೀಷನ್ನಿಗೆ 'ಸರ್ವೀಸ್ ಚಾರ್ಜ್' ಎನ್ನುವ ಪ್ರತಿಷ್ಠಿತ ಹೆಸರೂ ದೊರೆಯಿತು. ಬೈಕು, ಕಾರು, ಬ್ಯಾಂಕ್ ಲಾಕರು, ಸ್ವಂತ ಮನೆಗಳೆಲ್ಲ ತಂತಾನೆ ಬಂದವು. ಅದು ಇದು ಸಮಾಜ ಸೇವೆ, ಗಣೇಶೋತ್ಸವ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮಗಳಲ್ಲಿ ಮುಂಚೂಣಿ, ಒಂದೆರಡು ಸಣ್ಣ ಪೊಲೀಸ್ ಕೇಸುಗಳ ಜೊತೆಗೆ ರಾಜಕೀಯ ನಾಯಕರುಗಳ ಫ್ಲೆಕ್ಸುಗಳ ಹಿಂದಿನ ಹತ್ತಾರು ಮುಖಗಳ ನಡುವೆ ಗೋವಿಂದರಾಯನ ಮುಖವೂ ಕಾಣತೊಡಗಿತು. ಹಿಂದೆ ಹೇಗೋ ಇದ್ದು ಈಗ ಚದರ ಅಡಿ ಜಾಗಕ್ಕೆ ಏಳೆಂಟು ಸಾವಿರ ಬೆಲೆಬಾಳುವ ಬಡಾವಣೆಯಲ್ಲಿ ಒಂದು ರೇಂಜಿಗೆ ಬೆಳೆದು ನಿಂತಿದ್ದ ಆತ.

'ನನಗೆ ಗೊತ್ತಿರದಂತೆ ಈ ಏರಿಯಾದಲ್ಲಿ ಒಂದೇ ಒಂದು ಅಂಗುಲ ಜಾಗವೂ ರಿಜಿಸ್ಟರ್ ಆಗುವುದಿಲ್ಲ' ಎನ್ನುತ್ತಾ ತಿರುಗುತ್ತಿದ್ದ ಗೋವಿಂದರಾಯನಿಗೆ ದೊಡ್ಡ ಸವಾಲಾದುದು ಅವನ ಮನೆಯ ಪಕ್ಕದ ಸೈಟೇ. ಅದನ್ನು ಹೇಗಾದರೂ ಡೀಲ್ ಮಾಡಬೇಕು ಎಂದು ಹೊಂಚು ಹಾಕುತ್ತಿದ್ದ ಆತನಿಗೆ ಆ ಸೈಟಿನ ಮಾಲೀಕನಾರೆಂದು ಕಂಡುಹಿಡಿಯಲೇ ಸಾಧ್ಯವಾಗಿರಲಿಲ್ಲ. ಹಲವು ಹತ್ತುಕಡೆ ವಿಚಾರ, ಫೋನು ಓಡಾಟಗಳೆಲ್ಲ ಯಾವುದೇ ಸುಳಿವನ್ನು ಬಿಟ್ಟುಕೊಡಲಿಲ್ಲ. ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಲಂಚ ಕೊಟ್ಟು ಆ ಜಾಗದ ಕಾಗದಪತ್ರ ತೆಗೆಸಿ ನೋಡಿದ, ಬಿಬಿಎಂಪಿ ಆಫೀಸಿಗೆ ಹೋಗಿ ಜಾಗಕ್ಕೆ ಟ್ಯಾಕ್ಸ್ ಕಟ್ಟುತ್ತಿರುವವರಾರೆಂದು ನೋಡಿದ. ಅನೇಕ ವರ್ಷಗಳಿಂದ ಆ ನಿವೇಶನಕ್ಕೆ ಟ್ಯಾಕ್ಸೇ ಕಟ್ಟಿರಲಿಲ್ಲ. ಹೋದಲ್ಲೆಲ್ಲ ಮಾಲೀಕನ ಹೆಸರು ಸಿಕ್ಕಿತೇ ವಿನಃ ಆತನ ಸಂಪರ್ಕ ಸಂಖ್ಯೆ ಸಿಗಲಿಲ್ಲ. ಅಲ್ಲಿ ದಕ್ಕಿದ ವಿಳಾಸ ಹುಡುಕಿಕೊಂಡು ಹೋದರೆ ಆ ಮನೆಯಲ್ಲಿ ಯಾರೋ ಬೇರೆಯವರು ವಾಸವಾಗಿದ್ದರು. ಯಾವ ಪ್ರಯತ್ನಗಳೂ ಸಫಲವಾಗದಾಗ ಸೈಟಿನಲ್ಲಿ 'ನಾಟ್ ಫಾರ್ ಸೇಲ್, ಕಾಂಟಾಕ್ಟ್...' ಎಂದು ತನ್ನ ಫೋನ್ ನಂಬರನ್ನೇ ಹಾಕಿಕೊಂಡು ಬೋರ್ಡ್ ಒಂದನ್ನು ನೆಟ್ಟ. 'ಸೈಟ್ ಮಾರ್ತೀರಾ ಸಾರ್...' ಎಂಬ ಒಂದಿಷ್ಟು ಕರೆಗಳು ಬಂದದ್ದು ಬಿಟ್ಟರೆ ಯಾವುದೇ